ಬೆಳಗಾಂ ನಗರದ ಕೋಟೆಯ ಹತ್ತಿರ ಬಸ್ ಷೆಲ್ಟರ್

487 - ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ನಗರದ ಕೋಟೆ ಹತ್ತಿರ ಬಸ್ ತಂಗುದಾಣವನ್ನು ನಿರ್ಮಿಸಲು ಸರ್ಕಾರ ಯಾವಾಗ ಕ್ರಮವನ್ನು ತೆಗೆದುಕೊಳ್ಳುವುದು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕೋಟೆ ಪ್ರದೇಶದಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಲು ಬೇಕಾಗುವ ನಿವೇಶವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ವಾಧೀನದಲ್ಲಿರುವುದಿಲ್ಲ. ನಿವೇಶನವು ದೊರೆತಾಗ ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿದ ತಾಲ್ಲೂಕುಗಳು

111 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿದ ಒಟ್ಟು ತಾಲ್ಲೂಕುಗಳೆಷ್ಟು?*

ಆ) *ಈ ವ್ಯಾಪ್ತಿಗೆ ಸೇರಿಸಲು ಹಾಕಿಕೊಂಡಿರುವ ಮಾನದಂಡವೇನು?*

ಇ) *1992-93, 1993-94ರಲ್ಲಿ ಮಲೆನಾಡು ಅಭಿವೃದ್ಧಿಗಾಗಿ ಒದಗಿಸಲಾಗಿರುವ ಹಣ ಎಷ್ಟು?*

ಈ) *ವಿಚ್ಚಾಗಿರುವ ಹಣ ಎಷ್ಟು?*

ಉ) *ಈ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಹಣವೆಷ್ಟು?*

ಡಾ|| ಹೆಚ್.ಆರ್. ರಾಜು (ವಿಜ್ಞಾನ, ಯಂತ್ರಕಲೆ ಮತ್ತು ಪರಿಸರ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) 59 ತಾಲ್ಲೂಕುಗಳು.

ಆ) ಪಶ್ಚಿಮ ಘಟ್ಟದ ಯೋಜನೆಯಡಿಯಲ್ಲಿ ಭಾರತ ಸರ್ಕಾರವು ಸೇರಿಸಿರುವ ತಾಲ್ಲೂಕುಗಳನ್ನು ಸೇರಿಸಿರುವ ಹಾಗೆಯೇ ರಾಜ್ಯ ಸರ್ಕಾರವು ಕೆಲವು ತಾಲ್ಲೂಕುಗಳನ್ನು ಪಶ್ಚಿಮ ಘಟ್ಟದ ಯೋಜನೆಯಡಿಯಲ್ಲಿ ಸೇರಿಸಲು ಭಾರತ ಸರ್ಕಾರವನ್ನು ಕೇಳಿಕೊಂಡಿದೆ. ಅಂತಹ ತಾಲ್ಲೂಕುಗಳನ್ನು ಸಹ ಈ ಮಂಡಳಿಯಡಿಯಲ್ಲಿ ಸೇರಿಸಲಾಗಿದೆ.

ಇ) 1992-93ನೇ ಸಾಲಿನಲ್ಲಿ 35 ಕೋಟಿ ರೂ.ಗಳನ್ನು ಹಾಗೂ 1993-94ರಲ್ಲಿ 33 ಕೋಟಿ ರೂ.ಗಳನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಒದಗಿಸಲಾಗಿತ್ತು.

ಈ) 15.70 ಕೋಟಿ ರೂ.ಗಳು.

ಉ) 35 ಕೋಟಿ ರೂ.ಗಳು

ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ ಕೈಗಾರಿಕೆಗಳ ಮೇಲೆ ಆಗಿರುವ ಪರಿಣಾಮ

486 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?